# PAPER-III
# KANNADA

**Signature and Name of Invigilator**

1. (Signature) ____________________________
   (Name) ____________________________
2. (Signature) ____________________________
   (Name) ____________________________

Roll No. | | | | | | | | |

(In figures as per admission card)

Roll No.____________________________________

(In words)

**J 2 1 1 1**

Time : 2 $^1/_2$ hours] [Maximum Marks : **200**

Number of Pages in this Booklet : **32** Number of Questions in this Booklet : **19**

## Instructions for the Candidates

1. Write your roll number in the space provided on the top of this page.
2. Answer to short answer/essay type questions are to be given in the space provided below each question or after the questions in the Test Booklet itself.

   **No Additional Sheets are to be used.**
3. At the commencement of examination, the question booklet will be given to you. In the first 5 minutes, you are requested to open the booklet and compulsorily examine it as below :
   (i) To have access to the Question Booklet, tear off the paper seal on the edge of this cover page. Do not accept a booklet without sticker-seal and do not accept an open booklet.
   (ii) **Tally the number of pages and number of questions in the booklet with the information printed on the cover page. Faulty booklets due to pages/questions missing or duplicate or not in serial order or any other discrepancy should be got replaced immediately by a correct booklet from the invigilator within the period of 5 minutes. Afterwards, neither the Question Booklet will be replaced nor any extra time will be given.**
4. Read instructions given inside carefully.
5. One page is attached for Rough Work at the end of the booklet before the Evaluation Sheet.
6. If you write your Name, Roll Number, Phone Number or put any mark on any part of the Answer Sheet, except for the space allotted for the relevant entries, which may disclose your identity, or use abusive language or employ any other unfair means, you will render yourself liable to disqualification.
7. You have to return the test booklet to the invigilators at the end of the examination compulsorily and must not carry it with you outside the Examination Hall.
8. **Use only Blue/Black Ball point pen.**
9. **Use of any calculator or log table etc., is prohibited.**

## परीक्षार्थियों के लिए निर्देश

1. पहले पृष्ठ के ऊपर नियत स्थान पर अपना रोल नम्बर लिखिए ।
2. लघु प्रश्न तथा निबंध प्रकार के प्रश्नों के उत्तर, प्रत्येक प्रश्न के नीचे या प्रश्नों के बाद में दिये हुए रिक्त स्थान पर ही लिखिये ।
   **इसके लिए कोई अतिरिक्त कागज का उपयोग नहीं करना है ।**
3. परीक्षा प्रारम्भ होने पर, प्रश्न-पुस्तिका आपको दे दी जायेगी । पहले पाँच मिनट आपको प्रश्न-पुस्तिका खोलने तथा उसकी निम्नलिखित जाँच के लिए दिये जायेंगे, जिसकी जाँच आपको अवश्य करनी है :
   (i) प्रश्न-पुस्तिका खोलने के लिए उसके कवर पेज पर लगी कागज की सील को फाड़ लें । खुली हुई या बिना स्टीकर-सील की पुस्तिका स्वीकार न करें ।
   (ii) **कवर पृष्ठ पर छपे निर्देशानुसार प्रश्न-पुस्तिका के पृष्ठ तथा प्रश्नों की संख्या को अच्छी तरह चैक कर लें कि ये पूरे हैं । दोषपूर्ण पुस्तिका जिनमें पृष्ठ/प्रश्न कम हों या दुबारा आ गये हों या सीरियल में न हों अर्थात् किसी भी प्रकार की त्रुटिपूर्ण पुस्तिका स्वीकार न करें तथा उसी समय उसे लौटाकर उसके स्थान पर दूसरी सही प्रश्न-पुस्तिका ले लें । इसके लिए आपको पाँच मिनट दिये जायेंगे । उसके बाद न तो आपकी प्रश्न-पुस्तिका वापस ली जायेगी और न ही आपको अतिरिक्त समय दिया जायेगा ।**
4. अन्दर दिये गये निर्देशों को ध्यानपूर्वक पढ़ें ।
5. उत्तर-पुस्तिका के अन्त में कच्चा काम (Rough Work) करने के लिए मूल्यांकन शीट से पहले एक पृष्ठ दिया हुआ है ।
6. यदि आप उत्तर-पुस्तिका पर नियत स्थान के अलावा अपना नाम, रोल नम्बर, फोन नम्बर या कोई भी ऐसा चिह्न जिससे आपकी पहचान हो सके, अंकित करते हैं अथवा अभद्र भाषा का प्रयोग करते हैं, या कोई अन्य अनुचित साधन का प्रयोग करते हैं, तो परीक्षा के लिये अयोग्य घोषित किये जा सकते हैं ।
7. आपको परीक्षा समाप्त होने पर उत्तर-पुस्तिका निरीक्षक महोदय को लौटाना आवश्यक है और इसे परीक्षा समाप्ति के बाद अपने साथ परीक्षा भवन से बाहर न लेकर जायें ।
8. **केवल नीले/काले बाल प्वाईंट पेन का ही इस्तेमाल करें ।**
9. **किसी भी प्रकार का संगणक (केलकुलेटर) या लॉग टेबल आदि का प्रयोग वर्जित है ।**

**KANNADA**

**ಕನ್ನಡ**

**Paper – III**

**ಪ್ರಶ್ನೆ ಪತ್ರಿಕೆ – III**

**Note :** This paper is of **two hundred (200)** marks containing **four (4)** sections. Candidates are required to attempt the questions contained in these sections according to the detailed instructions given therein.

**ಸೂಚನೆ : (1)** ಈ ಪ್ರತ್ರಿಕೆಯು **ನಾಲ್ಕು (4)** ಭಾಗಗಳನ್ನೊಳಗೊಂಡಿದ್ದು ಒಟ್ಟು **ಇನ್ನೂರು (200)** ಅಂಕಗಳನ್ನು ಒಳಗೊಂಡಿರುತ್ತದೆ. ಅಭ್ಯರ್ಥಿಗಳು ಆಯಾ ಭಾಗಗಳಲ್ಲಿ ಪ್ರತ್ಯೇಕವಾಗಿ ಕೊಟ್ಟಿರುವ ಸೂಚನೆಗಳಿಗನುಸಾರವಾಗಿ ಉತ್ತರಿಸಬೇಕು.

(2) ಎಲ್ಲ ಪ್ರಶ್ನೆಗಳಿಗೂ ಕನ್ನಡದಲ್ಲಿಯೇ ಉತ್ತರಗಳನ್ನು ಬರೆಯಬೇಕು.

## SECTION – I
## ವಿಭಾಗ – I

**Note :** This section consists of two essay type questions of **twenty (20)** marks each, to be answered in about **five hundred (500)** words each. **(20 × 2 = 40 marks)**

**ಸೂಚನೆ :** ಈ ವಿಭಾಗವು **(20)** ಇಪ್ಪತ್ತು ಅಂಕಗಳ **ಎರಡು** ಪ್ರಬಂಧ ರೂಪದ ಪ್ರಶ್ನೆಗಳನ್ನು ಒಳಗೊಂಡಿರುತ್ತದೆ. ಪ್ರಶ್ನೆಗಳಿಗೆ ಉತ್ತರವನ್ನು **ಐದುನೂರು** (500) ಪದಗಳಿಗೆ ಮೀರದಂತೆ ಬರೆಯಬೇಕು.

**(20 × 2 = 40 ಅಂಕಗಳು)**

1. ಕನ್ನಡ ಭಕ್ತಿ ಸಾಹಿತ್ಯದ ವೈವಿಧ್ಯವನ್ನು ಪ್ರಮುಖ ಕವಿ-ಕೃತಿಗಳ ಹಿನ್ನೆಲೆಯಲ್ಲಿ ನಿರೂಪಿಸಿರಿ.

**ಅಥವಾ**

ಕನ್ನಡ ನವೋದಯ ಸಾಹಿತ್ಯದ ವೈವಿಧ್ಯತೆಯನ್ನು ಪ್ರಮುಖ ಕೃತಿಕಾರರ ಕೃತಿಗಳ ಹಿನ್ನೆಲೆಯಲ್ಲಿ ವಿಶದ ಪಡಿಸಿರಿ.

2. ಕನ್ನಡ ಸಾಹಿತ್ಯ ಸಂಶೋಧನೆಯು ಸಾಗಿ ಬಂದ ವಿವಿಧ ನೆಲೆಗಳನ್ನು ಸೋದಾಹರಣವಾಗಿ ವಿವರಿಸಿರಿ.

**ಅಥವಾ**

ದಲಿತ-ಬಂಡಾಯ ಸಾಹಿತ್ಯದ ಪ್ರಮುಖ ಆಶಯ ಮತ್ತು ತಾತ್ವಿಕ ನೆಲೆಗಳನ್ನು ಚರ್ಚಿಸಿರಿ.

## SECTION – II

## ವಿಭಾಗ – II

**Note :** This section contains **three (3)** questions from each of the electives/specializations. The candidate has to choose **only one** elective/specialization and answer all the **three** questions contained therein. Each question carries **fifteen (15)** marks and is to be answered in about **three hundred (300)** words. **(15 × 3 = 45 marks)**

**ಸೂಚನೆ :** ಈ ವಿಭಾಗವು ಐಚ್ಛಿಕ/ವಿಶೇಷ ವಿಷಯಗಳಿಗೆ ಸಂಬಂಧಿಸಿದಂತೆ **ಮೂರು (3)** ಪ್ರಶ್ನೆಗಳನ್ನು ಒಳಗೊಂಡಿರುತ್ತದೆ. ಅಭ್ಯರ್ಥಿಯು ಯಾವುದಾದರೂ ಒಂದು ಐಚ್ಛಿಕ/ವಿಶೇಷ ವಿಷಯವನ್ನು ಆರಿಸಿಕೊಂಡು ಅದರಲ್ಲಿನ ಎಲ್ಲ ಪ್ರಶ್ನೆಗಳಿಗೂ ಉತ್ತರಗಳನ್ನು ಬರೆಯಬೇಕು. ಪ್ರತಿಯೊಂದು ಪ್ರಶ್ನೆಗೂ **ಹದಿನೈದು (15)** ಅಂಕಗಳು. ಪ್ರತಿಯೊಂದು ಪ್ರಶ್ನೆಗೂ **ಮೂನ್ನೂರು (300)** ಪದಗಳಿಗೆ ಮೀರದಂತೆ ಉತ್ತರ ಬರೆಯಬೇಕು. **(15 × 3 = 45 ಅಂಕಗಳು)**

### Elective – I

### ಐಚ್ಛಿಕ – I

### ಜಾನಪದ ಅಧ್ಯಯನ

3. ಸ್ವಾತಂತ್ರ್ಯಪೂರ್ವ ಕಾಲಘಟ್ಟದಲ್ಲಿ ಜಾನಪದ ಅಧ್ಯಯನ ಬೆಳೆದು ಬಂದ ಬಗೆಯನ್ನು ವಿವರಿಸಿರಿ.
4. ಕರ್ನಾಟಕದ ವ್ಯಕ್ತಿಗಾಯಕ ಪರಂಪರೆಯನ್ನು ಯಾವುದಾದರೊಂದು ವ್ಯಕ್ತಿಗಾಯಕ ಪರಂಪರೆಯ ಹಿನ್ನೆಲೆಯಲ್ಲಿ ಚರ್ಚಿಸಿರಿ.
5. ಜಾನಪದವನ್ನು ಕುರಿತಂತೆ ಬಂದಿರುವ ವಿವಿಧ ನಿರ್ವಚನಗಳನ್ನು ತಿಳಿಸಿ, ಅವುಗಳ ಸಮಂಜಸತೆಯನ್ನು ಚರ್ಚಿಸಿರಿ.

**ಅಥವಾ / OR**

### Elective – II

### ಐಚ್ಛಿಕ – II

### ತೌಲನಿಕ ಸಾಹಿತ್ಯ ಅಧ್ಯಯನ

3. ಭಾಷಾಂತರದ ವಿವಿಧ ಬಗೆಗಳನ್ನು ಉದಾಹರಣೆಗಳ ಸಹಿತ ವಿವರಿಸಿರಿ.
4. ಸಂಸ್ಕೃತದ ಪ್ರಭಾವ ಮತ್ತು ಪ್ರೇರಣೆಗಳ ಸ್ವರೂಪವನ್ನು, ಕನ್ನಡ ಸಾಹಿತ್ಯವು ಅಳವಡಿಸಿಕೊಂಡ ನೆಲೆಗಳನ್ನು ಚರ್ಚಿಸಿರಿ.
5. ದೇಸೀ ಸಾಹಿತ್ಯದಲ್ಲಿ, ಪರಸ್ಪರ ಪ್ರಭಾವ-ಪ್ರೇರಣೆಗಳಿಂದ ಉಂಟಾದ ಸಾಹಿತ್ಯದ ಹೊಸ ಸ್ವರೂಪವನ್ನು ಉದಾಹರಣೆಗಳ ಸಹಿತ ವಿವರಿಸಿರಿ.

**ಅಥವಾ / OR**

### Elective – III

### ಐಚ್ಛಿಕ – III

### ಕನ್ನಡ ಛಂದಸ್ಸು

3. ಗಣ ಎಂದರೇನು ? ದ್ರಾವಿಡ ಭಾಷೆಗಳಿಗೆ ವಿಶಿಷ್ಟವಾದ ಅಂಶಗಣಗಳನ್ನು ಪರಿಚಯಿಸಿರಿ.
4. ಖ್ಯಾತ ಕರ್ಣಾಟಕಗಳೆಂದು ಭಾವಿಸಲಾದ ಛಂದೋರೂಪಗಳನ್ನು ಪರಿಚಯಿಸಿರಿ.
5. ಷಟ್ಪದಿಯ ಮೂಲ ಮತ್ತು ಅದರ ಬೆಳವಣಿಗೆಯನ್ನು ತಿಳಿಸಿರಿ.

**ಅಥವಾ / OR**

## Elective – IV

### ಐಚ್ಛಿಕ – IV

### ಶಾಸನ ಶಾಸ್ತ್ರ ಮತ್ತು ಕನ್ನಡ ಶಾಸನ ಸಾಹಿತ್ಯ

3. ಶಾಸನಗಳನ್ನು ವರ್ಗೀಕರಿಸಿ, ಅವುಗಳ ಸ್ವರೂಪವನ್ನು ವಿವರಿಸಿರಿ.
4. ದೇಕಬ್ಬೆ ಶಾಸನದ ಹಿನ್ನೆಲೆಯಲ್ಲಿ ಸಹಗಮನ ಪದ್ಧತಿಯನ್ನು ವಿಶ್ಲೇಷಿಸಿರಿ.
5. ಬುಕ್ಕರಾಯನ ಶ್ರವಣಬೆಳಗೊಳದ ಶಾಸನವನ್ನು ಅಂದಿನ ಧಾರ್ಮಿಕ ಹಿನ್ನೆಲೆಯಲ್ಲಿ ಪರಿಶೀಲಿಸಿರಿ.

### ಅಥವಾ / OR

## Elective – V

### ಐಚ್ಛಿಕ – V

### ತೌಲನಿಕ ದ್ರಾವಿಡ ಭಾಷಾವಿಜ್ಞಾನ

3. ತೌಲನಿಕ ಮತ್ತು ಸಾಮಾಜಿಕ ಭಾಷಾವಿಜ್ಞಾನದ ಸ್ವರೂಪ ಮತ್ತು ಲಕ್ಷಣಗಳನ್ನು ನಿರೂಪಿಸಿರಿ.
4. ದ್ರಾವಿಡ ಭಾಷೆಗಳಲ್ಲಿ ನಡೆಯುವ ಇ > ಎ, ಉ > ಒ ಸ್ವರ ಪರಿವರ್ತನೆಯ ಪ್ರಕ್ರಿಯೆಯನ್ನು ಸೋದಾಹರಣವಾಗಿ ವಿವರಿಸಿರಿ.
5. ದ್ರಾವಿಡ ಭಾಷೆಗಳಲ್ಲಿರುವ ಲಿಂಗ ಹಾಗೂ ವಚನ ವ್ಯವಸ್ಥೆಯನ್ನು ಕುರಿತು ಬರೆಯಿರಿ.

## SECTION – III

## ವಿಭಾಗ – III

**Note :** This section contains **nine (9)** questions of **ten (10)** marks each, to be answered in about **fifty (50)** words. **(10 × 9 = 90 marks)**

**ಸೂಚನೆ :** ಈ ಭಾಗದಲ್ಲಿ **ಒಂಬತ್ತು (9)** ಪ್ರಶ್ನೆಗಳಿವೆ. ಪ್ರತಿಯೊಂದು ಪ್ರಶ್ನೆಗೂ **ಐವತ್ತು (50)** ಪದಗಳಿಗೆ ಮೀರದಂತೆ ಉತ್ತರಿಸಿರಿ. ಪ್ರತಿಪ್ರಶ್ನೆಗೂ **ಹತ್ತು (10)** ಅಂಕಗಳು. ಎಲ್ಲ ಪ್ರಶ್ನೆಗಳನ್ನೂ ಉತ್ತರಿಸಿರಿ. **(10 × 9 = 90 ಅಂಕಗಳು)**

6. 'ರಾಮಚಂದ್ರ ಚರಿತ ಪುರಾಣ'ದಲ್ಲಿ 'ಸೀತಾಪಹರಣ' ಪ್ರಸಂಗ.

7. ಬಸವಣ್ಣನವರ ದೃಷ್ಟಿಯಲ್ಲಿ 'ಭಕ್ತಿ'.

8. ಕುವೆಂಪು ಅವರ ಕವಿತೆಗಳಲ್ಲಿ 'ನಿಸರ್ಗ ತತ್ವ'.

9. ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಸ್ತ್ರೀಪಾತ್ರಗಳ ವೈವಿಧ್ಯ.

10. ಟಿ.ಪಿ. ಕೈಲಾಸಂ ಅವರ ನಾಟಕಗಳ ಭಾಷೆ.

11. ಕನ್ನಡ ಸಂಶೋಧನೆ ಮತ್ತು ಶಂ.ಬಾ. ಜೋಶಿ.

12. ಲಾಂಜಿನಸನ 'ಮಹೋನ್ನತಿ' ತತ್ವ.

13. ಕನ್ನಡ ಭಾಷೆಯ ಬೆಳವಣಿಗೆಯಲ್ಲಿ 'ಸ್ವೀಕರಣ'ದ ಪಾತ್ರ.

14. ಟಿ.ಎಸ್. ಇಲಿಯಟ್ ಅವರ ವಿಮರ್ಶಾತತ್ವಗಳು.

## SECTION-IV

## ವಿಭಾಗ – IV

**Note :** This section contains **five (5)** questions of **five (5)** marks each based on the following passage. Each question should be answered in about **thirty (30)** words.

**(5 × 5 = 25 marks)**

**ಸೂಚನೆ :** ಈ ಭಾಗದಲ್ಲಿ ಈ ಕೆಳಗಿನ ಪಠ್ಯಭಾಗವನ್ನು ಆಧರಿಸಿ **ಐದು (5)** ಪ್ರಶ್ನೆಗಳನ್ನು ಕೊಡಲಾಗಿದೆ. ಪ್ರತಿಪ್ರಶ್ನೆಗೂ **ಮೂವತ್ತು (30)** ಶಬ್ದಗಳಲ್ಲಿ ಉತ್ತರಿಸಿರಿ. ಪ್ರತಿ ಪ್ರಶ್ನೆಗೂ **ಐದು (5)** ಅಂಕಗಳು.

**(5 × 5 = 25 ಅಂಕಗಳು)**

ಮನೋರಮೆ – (ಕಂಬನಿಗಱೆದು) ಆಃ ! ಎನ್ನೊಡೆಯ ! ನೀನುಮೆಂತು ಕಲ್ಮನನಾದಯ್ ! ಒರ್ತಡವೆಯೆ ದೇವಿಯಂ ಕಾರಡವಿಯೊಳುೞಿದು ಲಕ್ಷ್ಮಣಂ ಪೋದನೆಂಬೊಡೆ. ಮೈದುನಂಗಮಾ-ದೊಡಮೆಂತು ಮನಮಾದುದೋ ! ಮೇಣೆಂತು ದೇವಿಯರ್ಗೆ ಕಾವಲಿರದೆ ಪೋದನೋ ! ತೊಱೆದು ಪೋಪನ್ನಂ ಸೀತೆಯೇನೆಂದು ಮಱುಗಿದಳೋ ! ಅಕ್ಕಟಾ ! ಪೆಣ್ಗಳೊಂದು ಬಾೞ್ತೆ ಬಾೞ್ತೆಯೆ !

ಮುದ್ದಣಂ - (ತಾನುಂ ಸುರಿವಶ್ರುಜಲಮಂ ಕಿಱುವೆರಲಿಂ ಮಿಡಿದು) ಪ್ರಾಣೇಶ್ವರೀ ! ಈ ಇರವನೇನೆಂದು ಪೇೞ್ವೆನೊ ? ಅೞಲ್ ಕೊರಲನೌಂಕುಗುಂ. ಮುಂಗತೆಯನಾನುಂ ಪೇೞ್ವೆಂ.

ಮನೋ – 'ಪೆಣ್ಣೊಡಲಲ್ತೆ ! ಎಂತು ಸೈರಿಪೆಂ. ಸೀತೆ ಏನಾದಳ್ ಪೇೞ.'

ಮುದ್ದಣಂ - (ನೀಡುಂಸುಯ್ದು) ಆಯ್ತು, ಕೇಳ್, ಅಂತು ಗಂಗೆಯಂ ಸ್ತುತಿಸಿ ಮುಂತೆ ಸೀತೆಯುಂ ಪಿಂತೆ ಸೌಮಿತ್ರಿಯುಮಾಗೆ ಪಯಣಂ ಬೋದರ್. ಸೀತೆಗೆ ವೈಖಾನಸರ ಮುತ್ತೈದೆಯರನೇವೊೞ್ತಿಂಗೆ ಕಾಣ್ಬೆನೋ ಎಂಬೊಂದು ತವಕದಿಂ ನಡೆ ಮುಂಚಿದುದು ; ಲಕ್ಷ್ಮಣಂಗೆ ಅಣ್ಣನಾಣತಿಯನೆಂತೊರೆವೆನೋ ಮೇಣೆಂತು

ದೇವಿಯಂ ತೋಱುವೆನೋ ಎಂಬೊಂದು ದುಗುಡದಿಂ ಪಿಂಚಿದುದು. ಈ ಮಾೞ್ಕೆಯಿಂ ಕಡುದೂರಂ ನಡೆದು ಘೋರಾರಣ್ಯಮನೊಂದಂ ಪೊಕ್ಕರ್.

ಪ್ರಲಪಿಸುವ ರಾಘವನರ್ಧಾಂಗಿಯಿರವಂ ಕಂಡು ಲಕ್ಷ್ಮಣದೇವನ ಬಗೆಯೊಳೇನಕ್ಕುಂ ಬಗೆಯ. ಒಂದೆಡೆಯೊಳಗ್ರಭವನ ಕಟ್ಟಾಣತಿ ; ಒಂದೆಡೆಗೆ ಸೀತೆಯತ್ತಣ ಮಱುಕಂ. ಏವಂ ? ದೇವಿಗೆ ನೀನಂಜದಿರೆಂಬೊಡುಂಟೆ ? ಪುರಕೆ ಮರಲ್ಲುವೆನೆಂಬೊಡುಂಟೆ ? ತಾನೆ ಕಾವಲಿರ್ಪೆನೆಂಬೊಡುಂಟೆ ? ಆಃ ! ತಲೆವೋಕನೊಂದು ಮಾಟವೇ ! ಅಂತಾಗೆ ರಾಘವಾನುಜಂ ಶಶ್ವದ್ಗಳದಶ್ರುಧಾರಾಸಿಕ್ತ ಕಪೋಲಂ ಕಂಪಿತ ಕಾಯಂ ಸೀತೆಯ ಪದದೆಡೆಯೊಳ್ ಮೈಯಿಕ್ಕಿ – 'ದೇವಿಯರೆನ್ನಂ ಕಂದನೆಂದು ಸಂಬೋಧಿಸದಿರಿಂ, ಪಗೆವನೆಂದೇ ಬಗೆಯಿಂ. ಇನ್ನೆವರಮಣ್ಣನಾಣತಿಯಂ ನಿಮ್ಮೊಳೆಂದೆನಿಲ್ಲ. ನಾಡೊಳಾವನೊ ಮಡಿವಳನೊರ್ವನಭದ್ರಮಾಗೆ ದೇವಿಯರೊಳ್ ಕುಂದಿಟ್ಟು ದೇವರಂ ಚುನ್ನವಾಡಿದಂ ಗಡ ! ಅಂತೀದೂಸಱನಗ್ರಭವಂ ನಿಮ್ಮಂ ವಿಪಿನದೊಳಿೞಿಪಿ ಬರ್ಪುದೆಂದೆನ್ನಂ ಪೇೞ್ದಂ ; ಇದೆಕೊಳ್ಳಿಂ ಸ್ವಾಮಿಕಾರ್ಯಧುರಂಧರಂ ಅಗ್ರಜನಾಜ್ಞಾನುವರ್ತಿ ವೀರಾಗ್ರಗಣ್ಯಂ ಕೃತಕೃತ್ಯಂ ನಚ್ಚಿನ ಮೈದುನನೆಂ, ಲಕ್ಷ್ಮಣನೆಂ; ಈ ಒಸಗೆಯಂ ಪೇೞಲ್ಕೆಂದು ಬೆನ್ನಿಕ್ಕಿ ಪೊೞಲ್ಗೆ ಪೋದಪೆಂ' ಎಂದಂ.

ಸೀತೆಯಿರವನೇನೆಂಬೆನೊ ? ನೆಟ್ಟನೆ ಬೀಸುವ ಬಿಱುಗಾಳಿಯ ಪೊಯ್ಲಿಂಗರೆಮುಱಿದು ಬಾಡುವ ಕಪ್ಪುರವಾೞೆಯಂತೆ ಒರ್ಮೊದಲೊಳೆ ದೇವರನಾಡಿದ ಪರುಷತರವಾಕ್ಯಮಾರ್ಗಣಂ ಕರ್ಣಕೋಟರಮಂ ನಾಂಟೆ ಮೊಗಂಗುಂದಿ ದುಃಖಾವೇಶದಿಂ ನಿಶ್ಚೇಷ್ಟಿತೆಯಾಗಿ ಮೇಣೊರ್ಮೆ ಹಂಮದಂಬೋದಳ್. ಅನಿತಱೊಳೆ ಲಕ್ಷ್ಮಣಂ ನೆರೆಯೊಳೊಱುವರ್ಬಿಯ ನೀರಂ ಸೆಟ್ಟೆಲೆಯೊಳ್ ತಂದು ದೇವಿಯೊಳ್ ತನ್ನೊಂದು ಕಡೆವೊೞ್ತಿನ ಸೇವೆಯೆಂದು ಪಾದಕಮಲಮಂ ತೊಳೆದು ಕಣ್ಗೆ ಸುರಿದು ಕೈಗೆ ತೊಡೆದು ದೊನ್ನೆಯಂ ಪತ್ರಪುಷ್ಪಮೆನೆ ಬೈತಲೆಯೊಳ್ ಶೇಖರಿಸಿದಂ.

ಈ ಶೈತ್ಯೋಪಚಾರಸಪರ್ಯೆಗೆ ಪ್ರಸನ್ನೆಯಾದಳೆನೆ ಕಣ್ದೆಱೆದು ಕಯ್ಯಲುಗಿ ಕಾಲ್ಮಗುೞ್ಚಿ ಸುಯ್ಯಾಡಿದಳ್. ಇಂತು ಮೆಯ್ಯಱಿತು ಅಳವು ಗಱಿದ ಮನದೞಲಿಂ. – "ಎನ್ನೊಡೆಯಂ ತೊಱೆದನೇ ! ಶ್ರೀರಾಮಚಂದ್ರಮ ನಿಂದೆನ್ನಂ ಕೈವಿಟ್ಟನೇ ! ಹಾ ಕಾಂತ ! ಆವಗಂ ನೀನೆ ಗತಿಯೆಂದು ನಂಬಿ ಸೇರ್ದಳಂ ಇಂತೊರ್ಮೊದಲೊಳೆ ತ್ಯಜಿಸಲ್ಕೆಂತು ಮನದಂದಯ್ ? ಎನ್ನೊಳಾವುದೂಣೆಯಮಂ ಕಂಡಯ್ ? ಹಾ ! ಮನೋವಲ್ಲಭ ! ಆಂ ನಿನ್ನರ್ಧಾಂಗಿಯಲ್ತೆ ! ಪಟ್ಟದರಸಿಯಲ್ತೆ ! ಎನ್ನನುೞಿದೆಂತರೆಮೆಯ್ಯೊಳಿರ್ಪಯ್ ! ಎಂತು ಪಟ್ಟವಣೆಯನೇಱುವಯ್ ! ಹಾ ರಾಘವಾ ! ದುಷ್ಟರಾಕ್ಷಸನಂದು ಪುಸಿದವಸಿ ಎನ್ನಂ ಕಳ್ದುಯ್ಯಲೊಡಂ ಬಿಡಲಾಱದ ಮೋಹದಿಂ ಮಱುಗಿ ಕೊರಗಿ ಪುಡುಂಕಿವಂದು ತಿಬ್ಬಮಂತು ಪಿರಿದಾಯಸದಿಂ ಕಡಲ್ಗಣೆಗಟ್ಟಂ ಕಟ್ಟಿ ರಕ್ಕಸರೊಳ್ ಕಾದಿ ಮನೆಯೊಳ್ ಗೆಲ್ದು ಎನ್ನಂ ವನಕಟ್ಟುವೊಡೆಂದೇಂ ಮರಲ್ದಿದಯ್ ? ಹಾ ! ಕಾಂತ ! ನಿನ್ನಂ ಮಗುೞ್ದಿನ್ನೆಂದಿಂಗೆ ಕಾಂಬೆನೊ ! ಎಂದಿಂಗೆ ನಿನ್ನ ಸವಿನುಡಿಯನಾಲಿಪೆನೊ ! ಇನ್ನೆಂದಿಂಗೊಡಗೂಡುವೆನೊ ! ಹಾ ! ಹಾ ! ಆ ಬಿನ್ನಣದ ಆ ಬೆಡಂಗಿನ ಆ ಸೊಗಸಿನ ಆ ಗಾಡಿಯ ಆ ಸಿಂಗರದ ಆ ನಟನೆಯ ಆ ಅಂದದ ಆ ಹಾವದ ಆ ಭಾವದ ಆ ನೋಟದ ಆ ಬೇಟದ ಆ ಕೂಟದ ಸುಗ್ಗಿಯನೆಂತು ಮಱೆವೆನೋ ! ಹಾ ! ರಾಮಾ ! ಎಂದು ಸೀತೆ ಬಾಯೞಿದತ್ತಳ್.

ಇಂತು ಬಣ್ಣಿಸಿ ಬಣ್ಣಿಸಿ ಮಱುಮಱುಗಿ ಬಿನ್ನನಿರ್ದು ಮತ್ತಂ ಲಕ್ಷ್ಮಣನೊಳ್ – "ಕುಱುಂಬನ ಕುತ್ತಕ್ಕೆ ಕುಱಿಯ ಪಿತ್ತಮೆ ಮದ್ದಾಯ್ತು." ನೀಮನಿಬರ್ ಮೈದುನರಿರ್ದುಮೆನಗೀಪಾಡುಗೈದಿರೇ ! ಅಣ್ಣಂಗೆ ನಯಂ

ಬೇಱರೇ ! ತುಂಬಿದ ಬಸಿಱಿಯಲೇ, ಒಡಲನೆಂತಾಂ ಪಿಡಿದಿರ್ಪೆಂ ? ಅತ್ತೆವಿರಿಂತಿದರ್ಕೊರ್ಪ್ಪಿದರೆ ? ನಚ್ಚಿನ ಬಂಟಂ ಹನುಮಂತಂ ಕೆಮ್ಮನಿರ್ದನೆ ? ಸುಮಂತ್ರಾದ್ಯರ್ಗೆ ಮನಂ ಬಂದುದೆ ? ವೃದ್ಧಂ ಜಾಂಬವಂ ತಡೆಯದಾದನೆ ? ಹಾ ! ಹಾ ! <u>ಪೆಣ್ಣಿನೊಂದು ಬಾೞ್ಕೆ ಬಾೞ್ಕೆಯೆ</u> ? ಎಂದು ಬೞಿಯಂ ತನಗೆ ತಾಂ ತಿಳಿದು – ಅಃ ! ನಿಮ್ಮನ್ನರನೇಕೆ ನಿಷ್ಕಾರಣಂ ದೂಱುವೆನೊ ? ಎನ್ನ ಪೂರ್ವಸಂಚಿತದಿನೀ ಬಟ್ಟೆಯಾದುದಲ್ಲ ಆತನೇಗೆಯ್ಗುಂ ; ಕರುಣಾಸಾಗರನಲ್ತೆ ! ನಂಬಿದರಂ ಕಾವನೆಂಬ ಬಿರುದುಳ್ಳನಲ್ತೆ ! ಆತನಡಿಯೊಲ್ಮೆಯೊಂದಿರಲಯ್ ! ಎಂದು ಮತ್ತಂ ಕಣ್ಣನಿದುಂಬಿದಳ್.

ಇಂತಡಿಗೆಱಗಿದ ಮೈದುನನಂ ಸಂತವಿಟ್ಟು <u>'ಏಟೀಱ್ ಕಂದ ಕೈವಿಡಿದ ನಲ್ಲನೇ ಮುನಿವೆಡೆಯೊಳಾರೇನೆಂಗುಂ</u>. ನಿನ್ನೊಳೇನಪರಾಧಂ ? ಪೆಣ್ಣೆನಿಸಿ ಪುಟ್ಟಿದೆನ್ನಯ ದೋಷಂ. ಪೊತ್ತೞಿದುದಲ್ತೆ, ಪೋಗಯ್. ನಿನಗೆ ಮೇಲಕ್ಕೆ ! ಮೇಣ್ ಪಯಣಂ ಸೊಗಮಕ್ಕೆ ; ಎಮ್ಮೆಲ್ಲರ್ಗೆ ಶ್ರೀರಾಮನಡಿದಾವರೆಯೊಲ್ಮೆಯೊಂದು ವಜ್ರಪಂಜರಮಕ್ಕೆ ! ಪೋಗ್ಗೈ.' ಎಂದು ಪರಸಿ ಲಕ್ಷ್ಮಣಂಗೆ ಪಯಣಕ್ಕಾಣತಿಗೊಟ್ಟಳ್.

ಆಗಳ್ ಸೌಮಿತ್ರಿ ಡೋಲಾಯಮಾನಮಾನಸನಾಗಿ ದೇವಿಯಂ ಬಲವಂದು ಕೈಮುಗಿದು ದೆಸೆವಳರ್ಗೆ - ಈಕೆ ನಿಮಿಕುಲದೆ ಪುಟ್ಟಿದ ರಾಜಯೋಗಿಯಪ್ಪ ಜನಕನಣುಗುಗುವರಿ, ರಕ್ಕಸರ ಬಳಗಮಂ ಸದೆದು ದೆಸೆವಲಿಗೊಟ್ಟು ನಿಮ್ಮಂ ಪೊರೆದ ಶ್ರೀರಾಮನ ಪಟ್ಟದ ರಾಣಿ. ಎಮ್ಮಣ್ಣನಾಣತಿಗಿವಳಂ ವನದೊಳಿರಿಸಿ ಪೋಪೆಂ. ಪೂರ್ಣ ಗರ್ಭಿಣಿ, ನೀಮೆಲ್ಲರ್ ಕಾವಲಿರ್ದು ಕಾಯಿಮೆಂದುಂ ; ಭಾಸ್ಕರಂಗೆ - 'ಎಲೆ ಆದಿತ್ಯ ! ನಿನ್ನ ಕುಲವಧುವಿವಳ್ ; ನಿನ್ನ ಬೞಿವಳ್ಳಿ ಮಡಲ್ವೊಡಿವಳ್ ತಾಯ್ವೇರ್. ಅಂತದಱಿಂ ಇವಳೊಳ್ ದಿಟ್ಟಿಯಿರ್ಕೆ' ! ಎಂದುಂ ; ವನದೇವಿಗೆ - 'ಎಲೆ ಶಾಕಂಭರಿ ! ಇದೆಕೊಳ್ ಭಾಗ್ಯಲಕ್ಷ್ಮಿ ನಿನ್ನ ಕೆಳತನಕ್ಕೆಳಸಿ ಬಂದಿರ್ಪಳದುಕಾರಣಂ ನೀನುಮಿವಳುಮೊಡಗೆಳದಿಯರಾಗಿ ಸಂತಮಿರಿ' ಮೆಂದುಂ ಕೇಳಿಸಿ ಅಗಲ್ದು ಪೋಪನೆಂಬೊಂದು ಬೇಸಱಿಂ ಖಿನ್ನೆಯಾಗಿ ತನ್ನನೆ ನೋೞ್ಪ ದೇವಿಯಿರವಂ ನೆನೆನೆನೆದು <u>ಗಾಳಿಗೆ ಮಾಱೊಡ್ಡಿ ಪೋಪ ಪತಾಕೆಯ ಕೌಸುಂಭಾಂಬರದಂತಿರೆ</u> ಮನಂ ಪಿಂದುೞಿಯೆ ನಡೆವಟ್ಟೆಯೆನೆ ಪಲವುಂ ಪಂಬಲೊಂದು ದಂದುಗಂ ಬೆಟ್ಟಿತಾಗೆ ಬೀೞ್ಕೊಂಡಂ.

ಮುದ್ದಣಂ – ಅತ್ತಲಯೋಧ್ಯಾನಗರಿಯೊಳ್ ಜನ್ನಗುದುರೆಯಂ –

– ಮನೋರಮೆ – ಸುಡುಸುಡು ನಿನ್ನ ಜನ್ನಗುದುರೆಯಂ ! ಆ ಕತೆಗೀಗಳೆ ಪೊತ್ತೇ ? ಆಃ ! ಸೀತೆಯೇನಾದಳೆಂತಿರ್ದಳೆಂದು ಪೇೞಿಯ್.

15. ಮನೋರಮೆಯು 'ಹೆಣ್ಣಾಗಿ' ಸೀತೆಯ ಜೊತೆಗೆ ತನ್ನನ್ನು ಗುರುತಿಸಿಕೊಳ್ಳುವ ಬಗೆ ಹೇಗೆ ?

16. ಸೀತೆಯ ಮಾತುಗಳಲ್ಲಿ ಹೆಣ್ಣಿನ ಅಸಹಾಯಕತೆ ಹೇಗೆ ವ್ಯಕ್ತವಾಗಿದೆ ?

17. ಸೀತೆಯನ್ನು ರಕ್ಷಿಸಲಾಗದ ಲಕ್ಷ್ಮಣನ ಮನಸ್ಥಿತಿಯನ್ನು ವಿವರಿಸಿರಿ.

18. ಕಥೆಯ ವಿನ್ಯಾಸದ ಬದಲಾವಣೆಗೆ ಮನೋರಮೆಯು ಆಕ್ಷೇಪಿಸಿದ ರೀತಿಯನ್ನು ವಿವರಿಸಿರಿ.

19. ಈ ಪಠ್ಯಭಾಗಕ್ಕೆ ಹೊಂದುವ ಶೀರ್ಷಿಕೆಯನ್ನು ಬರೆದು, ಅದರ ಔಚಿತ್ಯವನ್ನು ನಿರೂಪಿಸಿರಿ.

**Space For Rough Work**

| FOR OFFICE USE ONLY | |
|---|---|
| Marks Obtained | |
| Question Number | Marks Obtained |
| 1 | |
| 2 | |
| 3 | |
| 4 | |
| 5 | |
| 6 | |
| 7 | |
| 8 | |
| 9 | |
| 10 | |
| 11 | |
| 12 | |
| 13 | |
| 14 | |
| 15 | |
| 16 | |
| 17 | |
| 18 | |
| 19 | |

Total Marks Obtained (in words) ..........................................

(in figures) ........................................

Signature & Name of the Coordinator ..................................

(Evaluation) Date .........................